**ದಿನಾಂಕ 12.10.2018 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ.ಎನ್.ಆರ್. ವಕೀಲರಿಂದ**

ನನ್ನ ಗಂಡ ತೀರಿ ಹೋಗಿ ಈಗ್ಗೆ 15 ವರ್ಷ ಆಯಿತು. ರಾಣಿ ಎಂಬುವವರು ಉಮೇಶನ ಹೆಂಡತಿ. ಉಮೇಶರವರ ತಂದೆಯ ಹೆಸರು ಶಿವರಾಜು. ನನ್ನ ಗಂಡನ ಅಣ್ಣತಮ್ಮಂದಿರು 3 ಜನ. ನನಗೆ ಮಕ್ಕಳಿಲ್ಲ. ನಾನು ಕಾರ್ತಿಕ್ ಎಂಬುವವರನ್ನು ದತ್ತು ತೆಗೆದುಕೊಂಡಿದ್ದೇನೆ. ದತ್ತು ಪತ್ರ ತಾಲ್ಲೂಕು ಕಚೇರಿಯ ಬಳಿ ಬರೆಯಿತು. ನನ್ನ ಗಂಡನ ಅಣ್ಣತಮ್ಮಂದಿರ ನಡುವೆ ಪಾಲುಪಾರಿಕತ್ ಆಗಿಲ್ಲ. ವಾದಿಗೆ ಸ್ವತ್ತುಗಳಲ್ಲಿ ಭಾಗ ಕೊಟ್ಟಿಲ್ಲ ಎಂದು ಈ ದಾವೆ ಹಾಕಿದ್ದಾರೆ. ಈ ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲಿ ಗ್ರಾಮದಲ್ಲಿ ಆಸ್ತಿ ಕೊಡಬೇಕೆಂದು ಪಂಚಾಯತಿ ಮಾಡಿಸಿದ್ದರು ಎಂದರೆ ಸರಿ. ಶಿವರಾಜು ಎಂಬುವವರು ವಾದಿಗೆ ಭಾಗ ಕೊಡದೇ 3-4 ಜನಕ್ಕೆ ಕ್ರಯ ಪತ್ರ ಮಾಡಿ ಕೊಟ್ಟಿದ್ದಾರೆ . ಸಾಕ್ಷಿ ನಮಗೂ ಗೊತ್ತಿಲ್ಲದೇ ಮಾಡಿದ್ದಾರೆಂದು ಹೇಳುತ್ತಾರೆ. ದಾವಾ ಆಸ್ತಿಗಳೆಲ್ಲಾ ನನ್ನ ಗಂಡನ ಅಣ್ಣತಮ್ಮಂದಿರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.